# ಕರ್ನಾಟಕ ಸರ್ಕಾರ
## ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

080 – 29753051
directorfbish@gmail.com
www.esuraksha.karnataka.gov.in

ನಿರ್ದೇಶಕರ ಕಛೇರಿ,
2ನೇ ಮಹಡಿ, ಕಲ್ಯಾಣ-ಸುರಕ್ಷಾ ಭವನ,
ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29


ಸಂ: ಎಲ್‌ಜಿಎಲ್–2/ಇತರೆ/ಸಿಆರ್–24/2020–21 ದಿ: 25–09–2020

**ಸುತ್ತೋಲೆ**

ವಿಷಯ : ರಾಜ್ಯದಲ್ಲಿನ ನೊಂದಾಯಿತ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಕೇಂದ್ರಗಳನ್ನು Karnataka Private Medical Establishment ಕಾಯ್ದೆಯಡಿ ನೊಂದಾಯಿಸುವ ಬಗ್ಗೆ.

* * * * *

ಅನ್ವಯವಾಗುವ ನೊಂದಾಯಿತ ಕಾರ್ಖಾನೆಗಳಲ್ಲಿ, ನಿಯಮ 88ರಡಿಯಲ್ಲಿ ಒಂದು ಔದ್ಯೋಗಿಕ ಆರೋಗ್ಯ ಕೇಂದ್ರ (Occupational Health Centre) ಹಾಗು ನಿಯಮ 92ರಯಲ್ಲಿ ತಿಳಿಸಿದಂತೆ ಆಂಬ್ಯುಲೆನ್ಸ್ ರೂಂ ಒದಗಿಸುವುದು ಕಡ್ಡಾಯವಾಗಿರುತ್ತದೆ.

ಮುಂದುವರೆದು, Karnataka Private Medical Establishment Act, 2007ರಡಿ ಆರೋಗ್ಯ ಕೇಂದ್ರಗಳ ಗುಣಮಟ್ಟವನ್ನು ಏಕರೂಪವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಸದರಿ ಕಾಯ್ದೆಯಡಿ ನೊಂದಾಯಿಸುವುದು ಅವಶ್ಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಸದರಿ ಔದ್ಯೋಗಿಕ ಆರೋಗ್ಯ ಕೇಂದ್ರ / ಆಂಬ್ಯುಲೆನ್ಸ್ ರೂಂಗಳು ಕೆಪಿಎಂಇ ಕಾಯ್ದೆಯಡಿ ನೋಂದಣಿಗೊಂಡು ಅವಶ್ಯ ತಪಾಸಣೆಗಳು ನಡೆಸಿದಲ್ಲಿ ಕಾರ್ಮಿಕರ ಆರೋಗ್ಯದ ವಿಷಯಗಳ ಸಮರ್ಪಕ ನಿರ್ವಹಣೆಗೆ ಸಹಾಯಕವಾಗುತ್ತದೆ ಎಂಬುದು ಇಲಾಖೆಯ ಆಶಯವಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಕ್ಷೇತ್ರಾಧಿಕಾರಿಗಳು ಅವರವರ ಕ್ಷೇತ್ರವ್ಯಾಪ್ತಿಯಲ್ಲಿ ಒಳಪಡುವ ಔದ್ಯೋಗಿಕ ಆರೋಗ್ಯ ಕೇಂದ್ರ / ಆಂಬ್ಯುಲೆನ್ಸ್ ರೂಂಗಳನ್ನು ಕೆಪಿಎಂಇ ಕಾಯ್ದೆಯಡಿ ನೊಂದಾಯಿಸುವ ಸಂಬಂಧ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸಿ ಅಗತ್ಯ ಕ್ರಮ ವಹಿಸುವಂತೆ ಆಡಳಿತವರ್ಗದವರಿಗೆ ತಿಳಿಸಲು ಸೂಚಿಸಿದೆ ಹಾಗೂ ಕೆಪಿಎಂಇ ಕಾಯ್ದೆಯಡಿ ನೊಂದಾಯಿಸಿರುವ ಕಾರ್ಖಾನೆಗಳ ವಿವರಗಳನ್ನು ಕೇಂದ್ರ ಕಚೇರಿಯ ಗಮನಕ್ಕೆ ತರಲು ತಿಳಿಸಿದೆ.

ನಿರ್ದೇಶಕರು
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು

**ಇವರಿಗೆ:**

1. ಕಾರ್ಖಾನೆಗಳು ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು, ಬೆಂಗಳೂರು ರವರ ಮಾಹಿತಿಗಾಗಿ.
2. ಕಾರ್ಖಾನೆಗಳ ಜಂಟಿ ನಿರ್ದೇಶಕರು ವಿಭಾಗ – 1 / 2 / 3 ಬೆಂಗಳೂರು / ಬಳ್ಳಾರಿ ರವರ ಮಾಹಿತಿಗಾಗಿ.
3. ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈದ್ಯಕೀಯ), ಬೆಂಗಳೂರು.
4. ಕಾರ್ಖಾನೆಗಳ ಉಪ ನಿರ್ದೇಶಕರು, ಬೆಂಗಳೂರು ವಿಭಾಗ – 1 / 2 / 3 / 4 / 5 ಮೈಸೂರು ವಿಭಾಗ – 1 / ಬೆಳಗಾವಿ ವಿಭಾಗ–1 / ಮಂಗಳೂರು ವಿಭಾಗ–1 / ಕಲಬುರ್ಗಿ ವಿಭಾಗ / ತುಮಕೂರು ವಿಭಾಗ.
5. ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ– 6 / 7 / 8 / 9 / 10, / ಹುಬ್ಬಳ್ಳಿ ವಿಭಾಗ –1 / ಬೆಳಗಾವಿ ವಿಭಾಗ–2 / ಬಳ್ಳಾರಿ ವಿಭಾಗ.
6. ಔದ್ಯೋಗಿಕ ಆರೋಗ್ಯ ತಜ್ಞರು, ಬೆಂಗಳೂರು.
7. ಕಾರ್ಖಾನೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ವಿಭಾಗ – 11 / 12 / 13 / 14/ 15 / 16 / 17 / 18 / 19 / 20, ದಾವಣಗೆರೆ ವಿಭಾಗ / ಶಿವಮೊಗ್ಗ ವಿಭಾಗ / ರಾಯಚೂರು ವಿಭಾಗ / ಹುಬ್ಬಳ್ಳಿ ವಿಭಾಗ–2 / ವಿ–2, ಮೈಸೂರು / ವಿ–2, ಮಂಗಳೂರು.

8. ಕಛೇರಿ ಪ್ರತಿ.